**<u>ಸಾಕ್ಷಿಯನ್ನು ದಿನಾಂಕ 20-07-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**.

**<u>ಮುಂದುವರೆದ ಪಾಟೀ ಸವಾಲುಃ ವಾದಿಯರ ಪರ ಶ್ರೀ ಆರ್.ಎಸ್ ವಕೀಲರಿಂದಃ</u>**

1. ದಾವಾ ಐಟಂ ನಂಬರ್ 3 ರ ಮನೆಯ ದಾಖಲೆಗಳು ಈಗಲೂ ನಂಧ್ಯಪ್ಪ ಬಿನ್ ಬಸಪ್ಪ ರವರ ಹೆಸರಿಗೆ ಇದೆ ಎಂದರೆ ಸರಿ. ಈಗ ನನಗೆ ತೋರಿಸಲಾದ ದಾಖಲೆ ಸದರಿ ಮನೆಯ ವಿಧ್ಯುತ್ ಬಿಲ್ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ **<u>ನಿ.ಪಿ.–9</u>** ಎಂದು ಗುರುತಿಸಲಾಯಿತು. ಸದರಿ ಮನೆಯಲ್ಲಿ ಒಟ್ಟು 3 ಭಾಗ ಆಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಪುನಃ 2 ಭಾಗ ಇದೆ ಎನ್ನುತ್ತಾರೆ. ಆ ಪೈಕಿ ಒಂದು ಭಾಗದಲ್ಲಿ ವಾದಿ ವಾಸವಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ವಾದಿಗೆ ಭಾಗ ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಿಂದ 3 ರ ಆಸ್ತಿಗಳಲ್ಲಿ ವಾದಿಯರಿಗೂ ಸಮಪಾಲು ಇದ್ದು, ಅವರ ಪಾಲನ್ನು ತಪ್ಪಿಸುವ ದುರುದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರ ಪಾಲು ತಪ್ಪಿಸುವ ಉದ್ದೇಶದಿಂದಲೇ ಈ ದಾವೆ ಚಾಲ್ತಿ ಇದ್ದಾಗಲೇ ದಾವಾ ಸ್ವತ್ತಿನಲ್ಲಿ ಕೆಲವು ಭಾಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸಾಕ್ಷಿ ದಾವೆಗೂ ಮೊದಲೇ ಮಾರಾಟ ಆಗಿತ್ತು ಎನ್ನುತ್ತಾರೆ. ನ್ಯಾಯಾಲಯದ ಆದೇಶದ ಹೊರತಾಗಿಯೂ ಆಸ್ತಿಗಳನ್ನು ಮಾರಾಟ ಮಾಡಲಾಗಿದೆ ಎಂದರೆ ಸಾಕ್ಷಿ ಅದಕ್ಕೂ ಮೊದಲೇ ಮಾರಾಟ ಆಗಿದೆ ಎನ್ನುತ್ತಾರೆ.

**ಮರುವಿಚಾರಣೆಃ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**